ಭಾರತೀಯ ಜನತಾ ಪಾರ್ಟಿ

11, ಅಶೋಕ ರಸ್ತೆ, ನವದೆಹಲಿ–110001

**Phone-011-23005700, Fax-011-23005787**

ಜನವರಿ 17,2013

**ಡೀಸಲ್ ಬೆಲೆ ನಿಯಂತ್ರಣ ಮುಕ್ತಗೊಳಿಸಿದ ನಿರ್ಣಯ ಕುರಿತು ಭಾಜಪ ಮಾಜಿ ಅಧ್ಯಕ್ಷ ಶ್ರೀ ರಾಜನಾಥ್ ಸಿಂಗ್ ಅವರ ಹೇಳಿಕೆ**

ಡೀಸಲ್ ಬೆಲೆಗಳ ಮೇಲಿರುವ ಸರ್ಕಾರದ ನಿಯಂತ್ರಣವನ್ನು ಆಂಶಿಕವಾಗಿ ತೆರೆವುಗೊಳಿಸುವ ನೀತಿಯನ್ನು ಯುಪಿಎ ಸರ್ಕಾರ ಇಂದು ಘೋಷಣೆ ಮಾಡಿದ್ದು, ಜನಸಾಮಾನ್ಯರ ಕುರಿತು ಯುಪಿಎ ಸರ್ಕಾರ ಸಂವೇದನೆ ಇಲ್ಲದೇ ಇರುವುದಕ್ಕೆ ಇದೊಂದು ಜ್ವಲಂತ ಉದಾಹರಣೆಯಾಗಿದೆ. ಮುಂಬರುವ ಕೆಲವು ತಿಂಗಳಲ್ಲಿ ತೈಲ ಬೆಲೆಯನ್ನು ಪ್ರತಿ ಲೀಟರಿಗೆ 9.60ರೂಪಾಯಿಯಷ್ಟು ಏರಿಸಲು ತೈಲ ಕಂಪನಿಗಳಿಗೆ ಅನುಮತಿ ನೀಡಿರುವ ಕಾರಣ ಹಣದುಬ್ಬರ ಮತ್ತಷ್ಟು ವೃದ್ಧಿಸಿ ಅರ್ಥವ್ಯವಸ್ಥೆ ತಲ್ಲಣಗೊಳ್ಳಲಿದೆ.

ಯುಪಿಎ ಸರ್ಕಾರ ಯಾವುದೇ ನಿರ್ದಿಷ್ಟ ತೈಲ ಬೆಲೆ ನಿಗದಿ ನೀತಿ ಹೊಂದಿರದೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ಏರಿದೊಡಣೆ, ಕಡೆ ಕ್ಷಣದಲ್ಲಿ ತಮಗೆ ತೋಚಿದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ.

ಕೃಷಿ ಚಟುವಟಿಕೆಗಳಲ್ಲಿ ಡೀಸಲ್ ಬಳಸುವ ನಮ್ಮ ರೈತರೂ ಸೇರಿದಂತೆ ಜನಸಾಮಾನ್ಯರಿಗೆ ಹೊರೆಯಾಗದ ರೀತಿ ಮತ್ತು ಹಣದುಬ್ಬರಕ್ಕೆ ಮತ್ತಷ್ಟು ಪ್ರಚೋದನೆ ನೀಡದೆಯಿರುವಂತೆ ವಿಶಾಲ ತಳಹದಿಯ, ಜನಸ್ನೇಹಿ ತೈಲ ಬೆಲೆ ನೀತಿಯ ಅಗತ್ಯ ನಮ್ಮ ದೇಶಕ್ಕಿದೆ. ಈಗ ಪ್ರಸ್ತಾಪಿಸಿರುವ 10 ರೂಪಾಯಿಗಳ ಅಗಾಧ ಏರಿಕೆಯು ರೈತರಿಗೆ ಬಲವಾದ ಪೆಟ್ಟು ನೀಡಲಿದೆ.

ಜಾರಿಯಲ್ಲಿರುವ ತೈಲ ಬೆಲೆ ನೀತಿಯನ್ನು ಸರ್ಕಾರ ಮರು ಪರಿಶೀಲಿಸಿ, ಆಂಶಿಕ ನಿಯಂತ್ರಣ ಮುಕ್ತ ನೀತಿಯನ್ನು ಹಿಂಪಡೆಯಲಿ.

(ಓ.ಪಿ.ಕ್ಹೊಲಿ)
ಮುಖ್ಯ ಕಚೇರಿ ಪ್ರಭಾರಿ